

ಮನೆ ಬಳಕೆಗೆ ಮಾತ್ರವಲ್ಲ,
ಕುಡಿಯಲೂ ಈ ರಾಡಿ ನೀರೇ ಗತಿ



ರಾಡಿಯಾದರೇನು ಶಿವಾ...



ಭವ್ಯ ಭಾರತವೇ ಬಾಯಾರಿ ನಿಂತಾಗ...



ಕೊಡಪಾನ ಮನೆಗೆ
ಸೇರಿಸುವ ವೇಳೆಗೆ
ಸುರಿವ ಬೆವರಿನ ಲೆಕ್ಕ
ಇಟ್ಟವರಾರು?

ನಾಡು ಬಾಯಾರಿದೆ. ಮಳೆಗಾಗಿ ಮುಗಿಲು ನೋಡುವಂತಾಗಿದೆ. ಜಲಾಶಯ, ಕಾಲುವೆ, ಕೆರೆ–ಕುಂಟೆಗಳು ತಳ ಕಂಡು ಮಣ್ಣು ಬಿರಿದಿದೆ. ಬಿಸಿಲ ಝಳ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ, ಬಿಸಿಗಾಳಿಯೂ ಜೊತೆಯಾಗಿದೆ. ಇರುವ ನೀರನ್ನು ಜತನದಿಂದ ಕಾಪಾಡಿಕೊಳ್ಳುವುದು ಈಗ ದೊಡ್ಡ ಸವಾಲು.

ಕುಡಿಯುವ ಶುದ್ಧ ನೀರು ಪಡೆಯುವುದು ವ್ಯಕ್ತಿಯ ಮೂಲಭೂತ ಹಕ್ಕು. ಈ ಹಕ್ಕನ್ನು ಸುಪ್ರೀಂ ಕೋರ್ಟ್ ಕೂಡ ಒತ್ತಿ ಹೇಳಿದೆ. ಆದರೆ, ಕೊಪ್ಪಳ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಕುಡಿಯುವ ಶುದ್ಧ ನೀರು ಈಗಲೂ ಗಗನಕುಸುಮ. ಜಿಲ್ಲೆಯ ಕವಲೂರು, ಹಂದ್ರಾಳ, ಅಳವಂಡಿ, ವೆಂಕಟಾಪುರ ತಾಂಡಾ, ನಿಡಶೇಸಿ, ಗುಡ್ಡದ ದೇವಲಾಪುರ ಭಾಗಗಳಲ್ಲಿ ನೀರು ಸಂಗ್ರಹಿಸಲು ಜನರು ಪಡುವ ಕಷ್ಟ ಅಷ್ಟಿಷ್ಟಲ್ಲ. ಅಳವಂಡಿ–ಕವಲೂರು ಭಾಗದಲ್ಲಿ ಕುಡಿಯುವ ನೀರು ಸಂಗ್ರಹಿಸಲು ಜನ ಸುಮಾರು ಎರಡರಿಂದ ಐದು ಕಿಲೋಮೀಟರುಗಳಷ್ಟು ದೂರ ಸಾಗುತ್ತಾರೆ. ಅಷ್ಟು ದೂರ ಹೋದ ನಂತರವೂ ಶುದ್ಧ ನೀರೇನೂ ದೊರೆಯುವುದಿಲ್ಲ. ರಾಡಿ ಮಿಶ್ರಿತ ಕೆರೆಯ ನೀರಷ್ಟೇ ಲಭ್ಯ.

ಕುಡಿಯಲಲ್ಲ, ಬಳಸಲೂ ಯೋಗ್ಯವಿಲ್ಲದ ಸ್ಥಿತಿಯ ನೀರದು. ಅಂತಹ ನೀರನ್ನೇ ಜನ ಕುಡಿಯುವುದನ್ನು ನೋಡಿದರೆ ಮನುಷ್ಯಮಾತ್ರದವರಿಗೆ ಕರುಳು ವಿಲವಿಲ ಎನ್ನಬೇಕು. ದೂರದಿಂದ ಬಂದವರು